## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **:** | **864** |
| **ಸದಸ್ಯರ ಹೆಸರು** | **:** | **ಡಾ. ಎಂ. ಜಿ ಮುಳೆ**<br>**(ವಿಧಾನ ಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | **:** | **13.03.2025** |
| **ಉತ್ತರಿಸಬೇಕಾದ ಸಚಿವರು** | **:** | **ಉಪ ಮುಖ್ಯಮಂತ್ರಿ** |

| **ಕ್ರ. ಸಂ** | **ಪ್ರಶ್ನೆ** | **ಉತ್ತರ** |
|---|---|---|
| **(ಅ)** | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಬಡಾವಣೆಗಳನ್ನು ನಿರ್ಮಿಸಿ ನಿವೇಶನಗಳನ್ನು ಹಂಚುವ ಕಾರ್ಯ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| **(ಆ)** | ಯಾವ ಯಾವ ಪ್ರದೇಶಗಳಲ್ಲಿ ಎಷ್ಟು ಬಡಾವಣೆಗಳ ನಿರ್ಮಾಣ ಕಾರ್ಯ ಕೈಗೊಳ್ಳಲಾಗಿದೆ; ಅವು ಯಾವ ಹಂತದಲ್ಲಿದೆ; | ಮಾಹಿತಿಯನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. |
| **(ಇ)** | ಎಷ್ಟು ದಿನಗಳಲ್ಲಿ ಬಡಾವಣೆಗಳನ್ನು ನಿರ್ಮಿಸಿ ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತದೆ; ನಿವೇಶನಗಳನ್ನು ಶೀಘ್ರವಾಗಿ ಹಂಚಲು ಕ್ರಮ ಕೈಗೊಳ್ಳಲಾಗುವುದೆ? | ➢ ಅರ್ಕಾವತಿ ಮತ್ತು ನಾಡಪ್ರಭು ಕೆಂಪೇಗೌಡ ಬಡಾವಣೆಗಳಲ್ಲಿ ಸಾರ್ವಜನಿಕರಿಗೆ ಈಗಾಗಲೇ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ಹಾಗೂ ಭೂಮಾಲೀಕರಿಗೆ 40:60 ರ ಅನುಪಾತದಲ್ಲಿ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ಭೂಪರಿಹಾರವಾಗಿ ಹಂಚಿಕೆ ಮಾಡಲಾಗುತ್ತಿದೆ.<br>➢ ಡಾ\|\| ಕೆ. ಶಿವರಾಮ ಕಾರಂತ ಬಡಾವಣೆಯ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು ಭೂಮಾಲೀಕರಿಗೆ ಮತ್ತು ಸಾರ್ವಜನಿಕರಿಗೆ ನಿವೇಶನಗಳ ಹಂಚಿಕೆಯ ಸಂಬಂಧ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಬಾಕಿಯಿರುವ ರಿಟ್ ಅಪೀಲು ಸಂಖ್ಯೆ:252/2017ರಲ್ಲಿನ ನಿರ್ದೇಶನಗಳನ್ನು ನಿರೀಕ್ಷಿಸಲಾಗಿದೆ. |

ಸಂಖ್ಯೆ: ನಅಇ 106 ಬೆಂಭೂಸ್ವಾ 2025

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ-864**

**ಅನುಬಂಧ**

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿರ್ಮಾಣ ಕಾರ್ಯ ಕೈಗೊಂಡಿರುವ ಪ್ರಮುಖ ಬಡಾವಣೆಗಳ ವಿವರ ಈ ಕೆಳಕಂಡಂತಿದೆ.

| ಬಡಾವಣೆಯ ಹೆಸರು | ಬಡಾವಣೆಯು ಒಳಗೊಂಡಿರುವ ಪ್ರದೇಶ | ನಿರ್ಮಾಣದ ಹಂತ |
|---|---|---|
| ಅರ್ಕಾವತಿ ಬಡಾವಣೆ | ಬೆಂಗಳೂರು ಪೂರ್ವ ತಾಲ್ಲೂಕು,ಕೆ.ಆರ್.ಪುರಂ ಹೋಬಳಿ, ದಾಸರಹಳ್ಳಿ, ಭೈರತಿಖಾನೆ, ಚಳ್ಳಕೆರೆ, ಗೆದ್ದಲಹಳ್ಳಿ, ಕೆ.ನಾರಾಯಣಪುರ, ರಾಚೇನಹಳ್ಳಿ, ಥಣಿಸಂದ್ರ, ಬೆಂಗಳೂರು ಉತ್ತರ ತಾಲ್ಲೂಕು ಯಲಹಂಕ ಹೋಬಳಿ, ಅಮೃತಹಳ್ಳಿ, ಜಕ್ಕೂರು, ಕೆಂಪಾಪುರ, ಸಂಪಿಗೇಹಳ್ಳಿ, ಶ್ರೀರಾಮಪುರ, ವೆಂಕಟೇಶಪುರ, ಬೆಂಗಳೂರು ಉತ್ತರ ತಾಲ್ಲೂಕು ಕಸಬಾ ಹೋಬಳಿ, ಹೆಣ್ಣೂರು, ನಾಗವಾರ, ಹೆಬ್ಬಾಳ ಗ್ರಾಮಗಳಲ್ಲಿನ ಸುಮಾರು 1766 ಎಕರೆ 07ಗುಂಟೆ. | ಭಾಗಶಃ ಮುಕ್ತಾಯ ಹಂತದಲ್ಲಿದೆ. |
| ನಾಡಪ್ರಭು ಕೆಂಪೇಗೌಡ ಬಡಾವಣೆ | ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ, ಶೀಗೇಹಳ್ಳಿ, ಕೊಡಿಗೇಹಳ್ಳಿ, ಕನ್ನಳ್ಳಿ, ಮಂಗನಹಳ್ಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೊಮ್ಮಘಟ್ಟ, ಭೀಮನಕುಪ್ಪೆ, ಭೀಮನಕುಪ್ಪೆ ರಾಮಸಾಗರ, ಸೂಲಿಕೆರೆ, ಕೆಂಚನಪುರ, ರಾಮಸಂದ್ರ, ಕೊಮ್ಮಘಟ್ಟ ಕೃಷ್ಣಸಾಗರ ಹಾಗೂ ಚಲ್ಲಘಟ್ಟ ಗ್ರಾಮಗಳಲ್ಲಿನ ಸುಮಾರು 4043ಎಕರೆ 27ಗುಂಟೆ. | ಅಂತಿಮ ಹಂತದಲ್ಲಿದೆ. |
| ಡಾ|| ಕೆ. ಶಿವರಾಮ ಕಾರಂತ ಬಡಾವಣೆ | ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ, ಸೋಮಶೆಟ್ಟಿ ಹಳ್ಳಿ, ಲಕ್ಷ್ಮೀಪುರ ಮತ್ತು ಗಾಣಿಗರಹಳ್ಳಿ, ಹೆಸರಘಟ್ಟ ಹೋಬಳಿ, ಬ್ಯಾಲಕೆರೆ, ಕಾಳತಮ್ಮನಹಳ್ಳಿ, ಗುಣಿ ಅಗ್ರಹಾರ, ಕೆಂಪಾಪುರ, ಯಲಹಂಕ ಹೋಬಳಿಯ ಮೇಡಿ ಅಗ್ರಹಾರ, ಅವಲಹಳ್ಳಿ, ವಡೇರಹಳ್ಳಿ, ರಾಮಗೊಂಡನಹಳ್ಳಿ, ಕೆಂಪನಹಳ್ಳಿ, ವೀರಸಾಗರ, ದೊಡ್ಡಬೆಟ್ಟಹಳ್ಳಿ, ಹಾರೋಹಳ್ಳಿ, ಶ್ಯಾಮರಾಜಪುರ, ಜಾರಕಬಂಡೆಕಾವಲ್ ಗ್ರಾಮಗಳಲ್ಲಿನ ಸುಮಾರು 3837 ಎಕರೆ. | ಪ್ರಗತಿಯಲ್ಲಿದೆ. |